ಕ್ರ.ಸಂ	ಜಿಲ್ಲೆಯ ಹೆಸರು	ಒಟ್ಟು ಸರಬರಾಜು
19	ಕೊಪ್ಪಳ	3838
20	ಬಳ್ಳಾರಿ	4828
21	ರಾಯಚೂರು	3684
22	ಗುಲ್ಬರ್ಗಾ	4027
23	ಬೀದರ್	7305
24	ಯಾದಗಿರಿ	3093
25	ಉತ್ತರ ಕನ್ನಡ	5457
26	ಗದಗ	2277
27	ಬೆಳಗಾವಿ ಉತ್ತರ–ಚಿಕ್ಕೋಡಿ	5886
28	ಬಾಗಲಕೋಟೆ	4452
29	ಬೆಳಗಾವಿ	4620
30	ಬಿಜಾಪುರ	6182
31	ಧಾರವಾಡ	3337
32	ಹಾವೇರಿ	6987
	ಒಟ್ಟು	**175023**

491(859) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹೇಮಾವತಿ ಅಣೆಕಟ್ಟು ನಿರ್ಮಾಣದಿಂದಾಗಿ ಸ್ಥಳಾಂತರ ಮಾಡಿದ ಜನಾರ್ಧನಹಳ್ಳಿ ಮತ್ತು ಕಟ್ಟೆಮರ ಗ್ರಾಮಗಳನ್ನು ಪುನರ್ವಸತಿ ಮತ್ತು ಪರಿಹಾರ ಒದಗಿಸುವ ಬಗ್ಗೆ ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು,

ಆ) ಈ ಕಾಯ್ದಿರಿಸಲಾದ ಜಾಗದಲ್ಲಿ ಎಷ್ಟು ಸಮಯದೊಳಗೆ ನಿವೇಶನ ಮಂಜೂರು ಮಾಡಿ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) **ಜನಾರ್ಧನಹಳ್ಳಿ** ಜನಾರ್ಧನಹಳ್ಳಿ ಗ್ರಾಮದಲ್ಲಿ ಮನೆಗಳು ಶೀತಪೀಡಿತವಾಗಿಲ್ಲವೆಂದು ಹಾಗೂ ಮನೆಗಳನ್ನು ತೇವಾಂಶರಹಿತವಾಗಿ ಮಾಡಲು ಸೂಕ್ತ ಚರಂಡಿ ನಿರ್ಮಾಣ ಮಾಡಿದಲ್ಲಿ ಗ್ರಾಮವನ್ನು ಸ್ಥಳಾಂತರಿಸುವ ಅಗತ್ಯವಿರುವುದಿಲ್ಲವೆಂದು ವಿಭಾಗಾಧಿಕಾರಿ ಮೈಸೂರು ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ದಿನಾಂಕ 22 10 1997 ರಂದು ಸ್ಥಳ ಪರಿಶೀಲನೆ ಮಾಡಿ ನೀಡಿದ ವರದಿಯ ಹಿನ್ನೆಲೆಯಲ್ಲಿ ಜನಾರ್ಧನಹಳ್ಳಿ ಗ್ರಾಮವನ್ನು ಮನರ್ವಸತಿಗೊಳಿಸಿರುವುದಿಲ್ಲ

ಕಟ್ಟೆಪುರ ಕಟ್ಟೆಪುರ ಗ್ರಾಮವನ್ನು ಹಿಂದೆ ಯಲಕನೂರು ಪುನರ್ವಸತಿ ಕಾಲೋನಿಗೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗಿದೆ

ಆ) ಜನಾರ್ಧನಹಳ್ಳಿ ಪುನರ್ವಸತಿಗಾಗಿ 6 ಎಕರೆ ಜಾಗವನ್ನು ಕಾಯ್ದಿರಿಸಲಾಗಿದ್ದು, ದಿನಾಂಕ 24 11 2006 ರಂದು ಕಂದಾಯ ಇಲಾಖೆಯು ಸೂಚಿಸಿದಂತೆ ಕಂದಾಯ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳ ಜಂಟಿ ತಪಾಸಣಾ ವರದಿ ನೀಡಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು

492(860) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ,

ಅ) ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಬರುವ ರಸ್ತೆಗಳಿಗೆ ರಾಜ್ಯ ಸರ್ಕಾರಕ್ಕೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ, ನಿಗದಿಪಡಿಸಲಾದ ಹಣವನ್ನು ರಾಜ್ಯ ಸರ್ಕಾರ ಯಾವ ಕಾರಣಕ್ಕಾಗಿ ಪಡೆಯಲಾಗಲಿಲ್ಲ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೇಂದ್ರ ಸರ್ಕಾರವು ರಾಜ್ಯದ ಗ್ರಾಮೀಣ ರಸ್ತೆ ಸಂಪರ್ಕ ಜಾಲವನ್ನು ಆಧರಿಸಿ ಅನುದಾನ ನಿಗದಿಗೊಳಿಸುತ್ತದೆ ರಾಜ್ಯ ಸರ್ಕಾರಕ್ಕೆ ರೂ 95 00 ಕೋಟಿ ವಾರ್ಷಿಕ